

# ಯೋಗ ಶಿಕ್ಷಕಿ ಈ ಹಿರಿಯಜ್ಜಿ



ಅಮೆರಿಕದ 98ರ (ಆ. 13, 1918) ಈ ಅಜ್ಜಿ ತಾವೊ ಪೋರ್ಶಾನ್ ಯೋಗ ಶಿಕ್ಷಕಿ; ಅತ್ಯಂತ ಹಿರಿಯ ವಯಸ್ಸಿನ ಯೋಗ ಶಿಕ್ಷಕಿ ಎಂದು ಗಿನ್ನೆಸ್ ದಾಖಲೆಯ ಹಿರಿಮೆ. ತನ್ನ ಎಂಟನೇ ವರ್ಷದಲ್ಲೇ ಯೋಗದತ್ತ ಆಕರ್ಷಿತಳಾಗಿ ಭಾರತದಲ್ಲಿ ಶ್ರೀ ಅರವಿಂದರು, ಬಿಕೆಎಸ್ ಅಯ್ಯಂಗಾರ್, ಕೆ.ಪಟ್ಟಾಭಿ ಜೋಯಿಸ್, ಸ್ವಾಮಿ ಪ್ರಭವಾನಂದ, ಮಹರ್ಷಿ ಮಹೇಶ್ ಯೋಗಿ ಮೊದಲಾದವರಲ್ಲಿ ಯೋಗಾಭ್ಯಾಸ. ಅಯ್ಯಂಗಾರ್ ಅವರ ಮೊದಲ ವಿದೇಶಿ ಯೋಗ ವಿದ್ಯಾರ್ಥಿನಿ ಎಂಬ ಖ್ಯಾತಿಯೂ ಈಕೆಯದು. ಆರಂಭದಲ್ಲಿ ಫ್ಯಾಷನ್ ಉದ್ಯಮದತ್ತ ಆಕರ್ಷಣೆ. ರೂಪದರ್ಶಿ, ಹಾಲಿವುಡ್ ನಟಿಯಾಗಿ ಯಶಸ್ಸು ಕಂಡ ನಂತರ ನ್ಯೂಯಾರ್ಕ್‌ನಲ್ಲಿ ವೃತ್ತಿಪರ ಯೋಗ ಶಿಕ್ಷಕಿಯಾಗಿ ವೆಸ್ಟ್‌ಚೆಸ್ಟರ್ ಯೋಗ ಸಂಸ್ಥೆಯ ಸ್ಥಾಪನೆ.

2012ರಲ್ಲಿ ಅಂದರೆ ಆಕೆಗೆ 93 ವರ್ಷಗಳಾಗಿದ್ದಾಗ ಅತ್ಯಂತ ಹಿರಿಯ ವಯಸ್ಸಿನ ಯೋಗ ಶಿಕ್ಷಕಿ ಎಂದು ಗಿನ್ನೆಸ್ ದಾಖಲೆಗೆ ಸೇರ್ಪಡೆ. ಯೋಗ ಕುರಿತು ಡಿವಿಡಿ ತಂದಿದ್ದು, 'ದಿ ಯೋಗಿಕ್ ಜರ್ನಿ ಆಫ್ ಲೈಫ್' ಹಾಗೂ ನಾಲ್ಕು ಪ್ರಶಸ್ತಿ ಗಳಿಸಿದ ಆತ್ಮಕಥೆ 'ಡಾನ್ಸಿಗ್ ಲೈಟ್' ಪುಸ್ತಕಗಳ ಕರ್ತೃ ಕೂಡಾ. ಈ ವಯಸ್ಸಿನಲ್ಲಿಯೂ ತನ್ನ ಸ್ಮಾರ್ಟ್ ಕಾರಿನಲ್ಲಿ ಯೋಗ ಕೇಂದ್ರಕ್ಕೆ ಬಂದು ವಿವಿಧ ದೇಶಗಳ ವಿದ್ಯಾರ್ಥಿಗಳಿಗೆ ಕಲಿಸುವುದಲ್ಲದೇ, ಈಗಲೂ ಬಾಲ್‌ರೂಂ ಟ್ಯಾಂಗೋ ನೃತ್ಯವನ್ನು ಕೂಡಾ ಮಾಡುತ್ತಾಳಂತೆ. ಅಷ್ಟೇ ಅಲ್ಲ, ನೃತ್ಯದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಕೂಡಾ ಪಡೆದಿದ್ದಾಳೆ. 'ಅಮೆರಿಕ ಹ್ಯಾಸ್ ಗಾಟ್ ಟಾಲೆಂಟ್'ನಲ್ಲೂ ಭಾಗವಹಿಸಿ ನರ್ತಿಸಿದ್ದಾಳೆ. ವೈನ್ ಕುರಿತ ನಿಯತಕಾಲಿಕದ ಸಂಪಾದಕಿ ಕೂಡಾ. ಎತ್ತರ ಹಿಮ್ಮಡದ ಚಪ್ಪಲಿಯ ಅಭಿಮಾನಿಯಾಗಿರುವ ತಾವೊ ಅದನ್ನೇ ಹಾಕಿಕೊಂಡು ಚಾರಣ ಕೂಡಾ ಮಾಡುತ್ತಾಳಂತೆ. ಈಕೆ ಅಪ್ಪಟ ಸಸ್ಯಾಹಾರಿ.

ಈಕೆಯ ತಂದೆ ಫ್ರೆಂಚ್ ಆಗಿದ್ದರೆ, ತಾಯಿ ಭಾರತೀಯಳು. ಅವಧಿಗೆ ಮುನ್ನವೇ ಅಂದರೆ ಏಳನೇ ತಿಂಗಳಿಗೇ ಹುಟ್ಟಿದ ಈಕೆಯ ತಾಯಿ ಹೆರಿಗೆಯಲ್ಲೇ ತೀರಿಕೊಂಡು ರೈಲ್ವೆ ಇಲಾಖೆಯಲ್ಲಿದ್ದ ಚಿಕ್ಕಪ್ಪನ ಜೊತೆ ಊರೂರು ಸುತ್ತುತ್ತಿದ್ದಾಗ ಯೋಗದಲ್ಲಿ ಆಕರ್ಷಣೆ ಬೆಳೆಯಿತಂತೆ. ಮಹಾತ್ಮಾ ಗಾಂಧಿ, ಮಾರ್ಟಿನ್ ಲೂಥರ್ ಕಿಂಗ್ ಜೊತೆ ಚಳವಳಿಯಲ್ಲಿ ಭಾಗವಹಿಸಿದಾಕೆ. ಪತಿ ಲಿಂಚ್ 1982ರಲ್ಲಿ ತೀರಿಕೊಂಡಿದ್ದು, ಕೊನೆಯ ಉಸಿರಿರುವವರೆಗೂ ಯೋಗ ಕಲಿಸುವ ಉಮೇದು ಈ ಅಜ್ಜಿಯದು.

■ ಎಸ್. ಹೆಗಡೆ